ಮಾಡಬೇಕು. ದೊಡ್ಡವಳನ್ನು ಕೊಟ್ಟ ಹಾಗೆ ಹಳ್ಳಿಯವನಿಗೆ ಇವಳನ್ನು ಕೊಡುವುದಿಲ್ಲ. ಭಗವತಿಯ ದಯೆಯಿಂದ ಒಳ್ಳೆಯ ನೌಕರಿಯಲ್ಲಿರುವ ಹುಡುಗನೇ ಸಿಕ್ಕಿಯಾನೆನ್ನುವ ನಂಬಿಕೆಯಲ್ಲಿದ್ದ ಸುರೇಶ.

★★★

ಯಾವುದೊ ಕೆಲಸದ ನಿಮಿತ್ತ ಮಂಗಳೂರಿಗೆ ಬಂದಿದ್ದ ಫಕೀರಿಚ್ಚ ಮಧ್ಯಾಹ್ನದ ಝಳ ತಡೆಯಲಾಗದೆ ತಾನು ನಿಂತಿದ್ದ ಬಸ್‌ಸ್ಟ್ಯಾಂಡ್ ಸಮೀಪವಿದ್ದ ಕೋಲ್ಡ್‌ಹೌಸ್ ಹೊಕ್ಕ. ಒಳಗೆ ಶಾಲೆಕಾಲೇಜುಗಳಿಂದ ಹೊರಬಿದ್ದ ಮಕ್ಕಳದ್ದೇ ಗೌಜು. ಒಂದು ಮೂಲೆಯಲ್ಲಿ ಮಧ್ಯವಯಸ್ಸು ದಾಟಿದವರೊಬ್ಬರು ಬಾಗಿಲಿಗೆ ಬೆನ್ನು ಹಾಕಿ ಕುಳಿತಲ್ಲಿ ಸ್ವಲ್ಪ ಜಾಗವಿತ್ತು. ಹಿಂದಿನಿಂದ ಆಕೃತಿ ನೋಡಿದಾಗ ತನ್ನದೇ ಊರಿನ ಶಿವಯ್ಯನಂತೆ ಕಂಡಿತು. ಸಮೀಪ ಹೋಗಿ ನೋಡಿದರೆ ಅದು ಅವನೇ. ಹತ್ತಿರ ಹತ್ತಿರ ಒಂದು ವರ್ಷವೇ ಆಗಿತ್ತು ಶಿವಯ್ಯನ ಮುಖ ಕಾಣದೆ. ಆಗಷ್ಟೆ ಜೂಸ್ ಕುಡಿದು ಮುಗಿಸಿರಬೇಕು. ಗ್ಲಾಸು ಖಾಲಿಯಾಗಿತ್ತು. "ಹೋಯ್! ಶಿವಯ್ಯ! ನೀವಿಲ್ಲಿ?" ಅನ್ನುತ್ತ ಬದಿಯಲ್ಲೆ ಕುಳಿತ ಫಕೀರಿಚ್ಚ.

"ಓ! ಫಕೀರಿಚ್ಚ. ಎಷ್ಟು ಸಮಯ ಆಯ್ತು ನಿಮ್ಮನ್ನು ಕಾಣದೆ. ಒಂದೇ ಊರಿನವರಾದ್ರೂ ಒಬ್ಬರನ್ನೊಬ್ಬರು ಕಾಣ್ಲಿಕ್ಕೆ ಈ ಮಂಗಳೂರು ಬೇಕು ನೋಡಿ! ನಂಗೆ ಕಂಕನಾಡಿಗೆ ಬರುವುದಿತ್ತು ಫಕೀರಿಚ್ಚ. ನಮ್ಮ ಶಂಕರಿಯನ್ನು ಇಲ್ಲಿ ಅಡ್ಮಿಟ್ ಮಾಡಿದೆ ಅಲ್ವ. ಈ ವಾರ ಮನೆಯವರು ಬಂದು ಹೋಗಬೇಕು ಅಂತ ಹೇಳಿದ್ರು. ಬೆಳಗ್ಗೆಯೇ ಬಂದಿದ್ದೆ. ಅಲ್ಲಿಂದ ಬರುವಾಗ ಇಷ್ಟು ಹೊತ್ತಾಯ್ತು. ಬಸ್ಸಿಗೆ ಕಾಯುತ್ತಿದ್ದೆ. ಬಾಯಾರಿಕೆ ತಡಿಲಿಕ್ಕಾಗ್ಲಿಲ್ಲ." ಅಂಗಿಯ ತೋಳಿನಲ್ಲಿ ಬಾಯಿ ಒರೆಸುತ್ತ ತನ್ನ ಪ್ರಯಾಣದ ಕಾರಣವನ್ನು ಒಂದೇ ಉಸಿರಲ್ಲಿ ಹೇಳಿದ ಶಿವಯ್ಯ. ಅಷ್ಟರಲ್ಲಿ ಅಲ್ಲಿಗೆ ಬಂದ ಮಾಣಿ ಮತ್ತೊಂದು ಜೂಸಿಗೆ ಆರ್ಡರ್ ಕೊಂಡು ಹೋದ. ಕಂಕನಾಡಿಗೆ ಈತ ಯಾಕೆ ಬಂದಿರಬಹುದೆಂದು ಫಕೀರಿಚ್ಚನಿಗೆ ಕೂಡಲೆ ಗೊತ್ತಾಗಿತ್ತು. ಶಿವಯ್ಯನ ಮೂವರು ಅಕ್ಕಂದಿರೂ ತಂದೆ, ತಾಯಿಯರ ಸಂಪತ್ತಿನ ಕೊರತೆಯಿಂದ; ತಮ್ಮ ರೂಪದ ಕೊರತೆಯಿಂದ ವಿವಾಹವಿಲ್ಲದೆ ನಡು ವಯಸ್ಸು ದಾಟಿದವರು. ಅವರಲ್ಲೊಬ್ಬಾಕೆ ಮಾನಸಿಕ ಸ್ಥಿಮಿತ ಕಳೆದುಕೊಂಡು ಊರು ಸುತ್ತಲಾರಂಭಿಸಿದಾಗ ಕಾಲಿಗೆ ಸರಪಳಿ ಬಿಗಿದಿದ್ದರು. ಫಕೀರಿಚ್ಚ ಕಳೆದ ವರ್ಷ ಈ ಶಿವಯ್ಯನ ಮನೆಯಲ್ಲಿ ಆಗಷ್ಟೆ ಕರು ಹಾಕಿದ ದನ ಮಾರಾಟಕ್ಕಿರುವ ಸುದ್ದಿ ಕೇಳಿ ಹೋಗಿದ್ದಾಗ, ಜಗಲಿ ಮೂಲೆಯಲ್ಲಿ ಕಟ್ಟಿ ಹಾಕಿದ್ದ ಹೆಂಗಸನ್ನು ನೋಡಿ ಕಂಗಾಲಾಗಿದ್ದ. ಶಿವಯ್ಯನ ಮನೆಯ ಬಡತನದ ಬದುಕಿನಲ್ಲಿ ಅವರು ಮಾಡಬಹುದಾದದ್ದು ಅಷ್ಟೆ ಆಗಿತ್ತೇನೋ. ಇಂಥವರನ್ನು ಕಂಕನಾಡಿಯಲ್ಲಿ ಸೇರಿಸಿಕೊಳ್ತಾರೆ ಅನ್ನುವ ವಿಚಾರ ಫಕೀರಿಚ್ಚನಿಗೆ ಗೊತ್ತಿತ್ತು. ಮೆಲ್ಲನೆ ವಿಷಯ ಪ್ರಸ್ತಾಪ ಮಾಡಿದಾಗ ಶಿವಯ್ಯ "ನಮ್ಮ ಪೈಕಿ ಒಂದಿಬ್ಬರು ಹೀಗೆ ಎಂತದೋ ಉಂಟು ಅಂತ ಸಂಗತಿ ಹೇಳಿದ್ರು. ಅದೆಲ್ಲ ನನ್ನಿಂದ ಆಗುವ ಕೆಲಸ ಅಲ್ಲ" ಅನ್ನುತ್ತ ನಿಟ್ಟುಸಿರು ಬಿಟ್ಟಿದ್ದ.

ಅಂದು ತಾನು ಹೋದ ಕೆಲಸ ಮುಗಿಸಿ ಬಂದ ಫಕೀರಿಚ್ಚ ಮತ್ತೊಮ್ಮೆ ಮಂಗಳೂರಿಗೆ ಹೋದಾಗ ಕಂಕನಾಡಿಗೆ ಹೋಗಿ ಇಂಥವರಿಗಾಗಿ ಏನಾದರೂ ಸಹಾಯವಿದೆಯೇ ಎಂದು ವಿಚಾರಿಸಿದ್ದ. ಅವರು ಕೊಟ್ಟ ಅರ್ಜಿ ತಂದು ಶಿವಯ್ಯನ ಕೈಯಿಂದ ತುಂಬಿಸಿ ತಾನೇ ಹೋಗಿ ಕೊಟ್ಟು ಬಂದಿದ್ದ. ಮುಂದೆ ಎರಡು ಮೂರು ವಾರದಲ್ಲಿ ಆಸ್ಪತ್ರೆಯವರೇ ಬಂದು ಆಕೆಯನ್ನು ಕೊಂಡೊಯ್ದಿದ್ದರು. ಅದರ ನಂತರ ಒಮ್ಮೆಯಷ್ಟೆ ಶಿವಯ್ಯನ ಭೇಟಿಯಾಗಿದ್ದು. ಫಕೀರಿಚ್ಚ ಜೂಸ್ ಕುಡಿಯುತ್ತಿದ್ದಾಗ ಶಿವಯ್ಯ, "ಶಂಕರಿಯನ್ನು ಇಲ್ಲಿಗೆ ಸೇರಿಸಿದ ಮೇಲೆ ಮನೆಯಲ್ಲಿ ಶಾಂತಿ